## ಮಾಧುರಿಯ ಬಕೆಟ್



ಬಾಲಿವುಡ್‌ನಲ್ಲಿ ಮಾಧುರಿ ದೀಕ್ಷಿತ್ ಮತ್ತೆ ಹಳಬಳಾಗುತ್ತಿದ್ದಾಳೆ. ಆಕೆ ಹಿಂದಿ ಚಿತ್ರದಲ್ಲಿ ನಟಿಸಿದ್ದು ನಾಲ್ಕು ವರ್ಷಗಳ ಹಿಂದೆ. ಈಗ ಇದೇ ಮೊದಲ ಬಾರಿಗೆ ಮರಾಠಿಯಲ್ಲಿ ನಟಿಸಿದ 'ಬಕೆಟ್ ಲಿಸ್ಟ್' ಚಿತ್ರ ಹೊರಬಂದಿದೆ. ಚಿತ್ರದಲ್ಲಿ ಆಕೆಯ ನಟನೆಯ ಬಗ್ಗೆ ಮೆಚ್ಚುಗೆಯ ಮಾತುಗಳು ಕೇಳಿಬಂದಿವೆ. ಚಿತ್ರದ ವಿಶೇಷವೆಂದರೆ 24 ವರ್ಷಗಳ ಬಳಿಕ ಈ ಚಿತ್ರದಲ್ಲಿ ರೇಣುಕಾ ಸಹಾನೆ ಜತೆಗೆ ಮಾಧುರಿ ನಟಿಸಿರುವುದು! ಈ ಹಿಂದೆ 1994ರಲ್ಲಿ ಬಂದ ಸೂಪರ್‌ಹಿಟ್ ಹಿಂದಿ ಚಿತ್ರ 'ಹಮ್ ಆಪ್‌ಕೆ ಹೈ ಕೌನ್' ನಲ್ಲಿ ಇವರಿಬ್ಬರೂ ಜತೆಯಾಗಿ ನಟಿಸಿದ್ದರು.

ಸುಮೀತ್ ರಾಘವನ್ ಜತೆಗೆ ಹೀರೋಯಿನ್ ಆಗಿ ಮಾಧುರಿ ನಟಿಸುತ್ತಿರುವ ಹೊಸ ಹಿಂದಿ ಚಿತ್ರದ ಬಗ್ಗೆ ಬಾಲಿವುಡ್‌ನಲ್ಲಿ ಈಗಾಗಲೆ ಸಾಕಷ್ಟು ನಿರೀಕ್ಷೆ ವ್ಯಕ್ತವಾಗಿದೆ. ಈ ಮಧ್ಯೆ ಟಿವಿ ಷೋಗಳಲ್ಲಿ ಮಾಧುರಿ ಪಾಲ್ಗೊಳ್ಳುವಿಕೆ ಮುಂದುವರಿದಿದೆ. 'ಜಲಕ್ ದಿಖ್ಲಾ ಜಾ' ಮತ್ತು 'ಸೋ ಯೂ ಥಿಂಕ್ ಯೂ ಕ್ಯಾನ್ ಡ್ಯಾನ್ಸ್' ರಿಯಾಲಿಟಿ ಷೋಗಳಲ್ಲಿ ತೀರ್ಪುಗಾರ್ತಿ ಆಗಿದ್ದ ಮಾಧುರಿ, ಈಗ ಇನ್ನೊಂದು ಡ್ಯಾನ್ಸ್ ಷೋ 'ಡ್ಯಾನ್ಸ್ ದೀವಾನೆ'ಯಲ್ಲಿಯೂ ತೀರ್ಪುಗಾರಳಾಗಿದ್ದಾಳೆ.

'ಟಿವಿ ಷೋನಲ್ಲಿ ತೀರ್ಪುಗಾರ್ತಿ ಆಗಿರುವ ಕೆಲಸ ಖುಷಿ ತಂದಿದೆ. ಈಗಿನ ಯುವಜನರಿಗೆ ಶಾಸ್ತ್ರೀಯ ನೃತ್ಯಗಳಲ್ಲಿ ಇರುವ ಆಸಕ್ತಿಯ ಬಗ್ಗೆಯೂ ನನಗೆ ಕುತೂಹಲ ಉಂಟಾಗಿದೆ' ಎಂದಿದ್ದಾಳೆ ಮಾಧುರಿ.

## ಗಟ್ಟಿಗಿತ್ತಿ ಪ್ರಿಯಾಂಕಾ



ಬ್ರಿಟನ್ನಿನ ಅರಮನೆಯಲ್ಲಿ ಗೆಳತಿ ಮೇಘನ್ ಮಾರ್ಕಲ್‌ಳ ಮದುವೆಯಲ್ಲಿ ಖುಷಿಯಿಂದ ಓಡಾಡುತ್ತಿದ್ದ ಪ್ರಿಯಾಂಕಾ ಚೋಪ್ರಾ ಮಾಧ್ಯಮದವರ ಕಣ್ಣಿಗೆ ಹೆಚ್ಚಾಗಿ ಬೀಳಲೇ ಇಲ್ಲ. ಆದರೆ ಅಲ್ಲಿಂದ ಆಕೆ ರೊಹಿಂಗ್ಯಾದ ನಿರಾಶ್ರಿತರ ಶಿಬಿರಕ್ಕೆ ತೆರಳಿ ಅಲ್ಲಿ ನಿವಾಸಿಗಳ ಜತೆಗೆ ದಿನ ಕಳೆದದ್ದು ಬಹುದೊಡ್ಡ ಜಾಗತಿಕ ಸುದ್ದಿಯಾಗಿದೆ.

ಪ್ರಿಯಾಂಕಾ ಹಾಲಿವುಡ್– ಬಾಲಿವುಡ್‌ನ ಜನಪ್ರಿಯ ನಟಿ ಮಾತ್ರವಲ್ಲ, ಹಲವು ಸಾಮಾಜಿಕ ಕಾರ್ಯಕ್ರಮಗಳಲ್ಲೂ ನಿರಂತರ ಭಾಗವಹಿಸುತ್ತಿದ್ದಾಳೆ. ಯುನಿಸೆಫ್‌ನ ಸದಾಶಯ ರಾಯಭಾರಿ ಆಗಿರುವ ಪ್ರಿಯಾಂಕಾ ರೊಹಿಂಗ್ಯಾದಲ್ಲಿ ಕಂಡುಂಡ ಅನುಭವಗಳನ್ನು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿರುವುದು ಮನ ಕಲಕುವಂತಿದೆ. 'ಜಮ್ಟೋಲಿ ನಿರಾಶ್ರಿತ ಶಿಬಿರಕ್ಕೆ ನಾನು ಭೇಟಿ ಕೊಟ್ಟಾಗ ಅಲ್ಲೊಂದು ನೀರವ ಮೌನ ನನ್ನನ್ನು ಕಾಡಿತು. ಈ ಶಿಬಿರದಲ್ಲಿ ಜನ ತುಂಬಿ ತುಳುಕುತ್ತಿದ್ದಾರೆ. ಆದರೆ ಎಲ್ಲರ ಮನದಲ್ಲಿ ಒಂದು ವಿಷಾದದ ಮೌನವಿದೆ. ಹಾಗಿದ್ದೂ ಇಲ್ಲಿರುವ ಎಲ್ಲ ಹೆಣ್ಣುಮಕ್ಕಳಿಗೆ ಇದು ಶಾಂತಿಯ ತಾಣವೇ. ಶಿಬಿರಕ್ಕೆ ಬಂದು ಸೇರಿದರೆ ಇತರರ ಜತೆಗೆ ಒಡನಾಟ, ಕೌನ್ಸೆಲಿಂಗ್, ಸ್ವಚ್ಛತೆಯ ಬಗ್ಗೆ ಕಲಿಕೆ, ಕಲೆ ಮತ್ತು ಸಂಗೀತದ ಕಲಿಕೆ ಎಲ್ಲವೂ ಸಾಧ್ಯವಾಗುತ್ತಿದೆ. ಆದರೆ ಇಲ್ಲಿರುವ ಕೆಲವು ನಿರಾಶ್ರಿಯ ಹೆಣ್ಣುಮಕ್ಕಳ ಮೇಲೆ ಹಿಂದೆ ನಡೆದ ದೌರ್ಜನ್ಯದ ಕಥೆಗಳನ್ನು ಕೇಳಿದರೆ ಎದೆ ನಡುಗುತ್ತದೆ' ಎಂದು ಪ್ರಿಯಾಂಕಾ ಬರೆದುಕೊಂಡಿದ್ದಾಳೆ.

ನಿರಾಶ್ರಿತ ಹೆಣ್ಣುಮಕ್ಕಳ ಬದುಕಿಗೆ ಧೈರ್ಯ ತುಂಬುವ ಪ್ರಿಯಾಂಕಾಳ ಈ ನಡೆ ಜಾಗತಿಕ ಮಟ್ಟದಲ್ಲಿ ಶ್ಲಾಘನೆಗೆ ಕಾರಣವಾಗಿದೆ. ಆದರೆ ಸರ್ಕಾರದ ಪರ ಇರುವ ಕೆಲವರು ಈ ಬಗ್ಗೆ ಜಾಲತಾಣಗಳಲ್ಲಿ ವ್ಯಂಗ್ಯವಾಡಿದ್ದೂ ಇದೆ. ಪ್ರಿಯಾಂಕಾ ಗಟ್ಟಿಗಿತ್ತಿ. ಇದಕ್ಕೆಲ್ಲ ಸೊಪ್ಪು ಹಾಕಿಲ್ಲ. ತನಗನ್ನಿಸಿದ್ದನ್ನು ಹೇಳುವುದರಲ್ಲಿ ಆಕೆ ಬಿಂದಾಸ್ ಕೂಡಾ ಹೌದು.